**ದಿನಾಂಕ 27.07.2024 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಪಾಟೀಸವಾಲುಃ ಶ್ರೀ ಹೆಚ್.ಡಬ್ಲೂ.ಎ. ವಕೀಲರಿಂದಃ**

1. ನನ್ನ ತಂದೆಯ ಹೆಸರು ಚಿನ್ನಪ್ಪ, ಅವರಿಗೆ ಇಬ್ಬರು ಅಣ್ಣಂದಿರು, ಅವರುಗಳೆಂದರೆ ರಂಗಪ್ಪ ಮತ್ತು ಗುಂಡಪ್ಪ, ಸದರಿಯವರು ವ್ಯವಸಾಯ ಮಾಡುತ್ತಿದ್ದರು. ದಾವಾ ಸ್ವತ್ತುಗಳು ನನ್ನ ತಂದೆ ಮತ್ತು ಅವರ ಅಣ್ಣಂದಿರಿಗೆ ಸೇರಿದ್ದು ಎಂದರೆ ಸರಿ. ಸಾಕ್ಷಿ ಮುಂದುವರೆದು ತಾತ ಸುಂಕಪ್ಪನಿಗೆ ಸೇರಿದೆ ಎಂದು ನುಡಿಯುತ್ತಾರೆ. ನನ್ನ ತಂದೆ ಮತ್ತು ನನ್ನ ದೊಡ್ಡಪ್ಪನವರು ಜಂಟಿ ವ್ಯವಾಹಾರ ಮಾಡುತ್ತಿದ್ದು, ತೊಂದರೆಯಾಗಿದೆ ಎಂದು ಹೇಳಿ ದಾವಾ ಸ್ವತ್ತುಗಳನ್ನು 1970 ನೇ ಸಾಲಿನಲ್ಲಿ ನನ್ನ ತಾಯಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ನನ್ನ ದೊಡ್ಡಪ್ಪನವರು ಬೇರೆಯಾರಿಗೂ ಜಮೀನನ್ನು ಮಾರಾಟ ಮಾಡಲು ಹೋದಾಗ ಬೇರೆಯವರಿಗೆ ಕೊಡುವುದು ಬೇಡ ಎಂದು ನನ್ನ ತಾಯಿ ಗಂಗಮ್ಮ ಕೋಂ ಚಿನ್ನಪ್ಪ ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.
2. ನನ್ನ ತಾಯಿ ಜಮೀನು ಖರೀದಿ ಮಾಡಿದ ನಂತರ ಅವರ ಹೆಸರಿಗೆ ಖಾತೆಯನ್ನು ಮಾಡಿಸಿಕೊಂಡು ವ್ಯವಸಾಯ ಮಾಡುತ್ತಿದ್ದರು ಎಂದರೆ ಸರಿ. ಸದರಿ ಜಮೀನಿನಲ್ಲಿ ಭಾವಿಯನ್ನು ತೆಗೆಸಲು ಪಿ.ಎಲ್.ಡಿ. ಬ್ಯಾಂಕಿನಿಂದ ಸಾಲವನ್ನು ಪಡೆದಿದ್ದರು ಎಂದರೆ ಸರಿ. ನನ್ನ ತಂದೆ 1997 ರಲ್ಲಿ ತೀಕರಿಕೊಂಡಿರುತ್ತಾರೆ. ನನ್ನ ತಾಯಿ 04.04.2008 ರಲ್ಲಿ ತೀರಿಕೊಂಡಿರುತ್ತಾರೆ. ನನ್ನ ತಾಯಿಯು ವ್ಯವಸಾಯದಲ್ಲಿ ನಷ್ಟ ಹೊಂದಿ ಪಿ.ಎಲ್.ಡಿ. ಬ್ಯಾಂಕಿನ ಸಾಲವನ್ನು ತೀರಿಸಲು ಸಾಧ್ಯವಾಗಿರಲಿಲ್ಲ ಎಂದರೆ ಸರಿಯಲ್ಲ, ನನ್ನ ತಾಯಿಯು ಸಾಲವನ್ನು ತೀರಿಸಿರುತ್ತಾರೆ ಎಂದು ಸಾಕ್ಷಿ ನುಡಿಯುತ್ತಾರೆ. ನನ್ನ ತಾಯಿ ಸಾಲವನ್ನು ತೀರಿಸಲು ಆಗದೆ ದಾವಾ ಸ್ವತ್ತುಗಳನ್ನು 13.12.1984 ರಲ್ಲಿ ಬಸವರಾಜು ಎನ್ನುವವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಮಾರಾಟವಾದ ನಂತರ ಖಾತೆಯೂ ಸಹ ಆಗಿದೆ ಎಂದರೆ ಸಾಕ್ಷಿಯು ಸುಳ್ಳು ಸೃಷ್ಟಿ ಮಾಡಿದ್ದಾರೆ ಎಂದು ನುಡಿಯುತ್ತಾರೆ.
3. ನನ್ನ ತಾಯಿ ತೀರಿಕೊಂಡ ನಂತರ ದಾವಾ ಸ್ವತ್ತುಗಳನ್ನು ನನ್ನ ಹೆಸರಿಗೆ ಮಾಡಿಕೊಡುವಂತೆ ರೆವೆನ್ಯೂ ಅಧಿಕಾರಿಗಳಿಗೆ ಅರ್ಜಿಯನ್ನು ಕೊಟ್ಟಿದ್ದೀರಾ ಎಂದರೆ ಸಾಕ್ಷಿಯು ನಾನು ಅಡ್ವೋಕೆಟ್ ಜನರಲ್ ನಲ್ಲಿ ಕೆಲಸ ಮಾಡುತ್ತಿದ್ದು, ನನಗೆ ಸಣ್ಣ ಮಕ್ಕಳು ಇದ್ದು, ಜಮೀನನ್ನು

ನನ್ನ ಅಣ್ಣಂದಿರು ಉಳುಮೆ ಮಾಡುತ್ತಿದ್ದು, ನಾನು ಅರ್ಜಿಯನ್ನು ಕೊಟ್ಟಿರಲಿಲ್ಲ. ನನ್ನ ಅಣ್ಣ 1 ನೇ ವಾದಿ ಗಂಗಾಧರ್. ನನ್ನ ಅಣ್ಣಂದಿರೂ ಸಹ ಯಾರೂ ಸಹ ಅರ್ಜಿಯನ್ನು ಕೊಟ್ಟಿಲ್ಲ, ಅವರು ಅವಿದ್ಯಾವಂತರು. 1983 ನೇ ಸಾಲಿನ ನಂತರ ನನ್ನ ತಾಯಿ ಬಸವರಾಜುವಿಗೆ ಕ್ರಯಕ್ಕೆ ಕೊಟ್ಟ ನಂತರ ನಾನಗಲೀ ಅಥವಾ ನನ್ನ ತಾಯಿಯಾಗಲೀ ಸದರಿ ದಾವಾ ಸ್ವತ್ತಿಗೆ ಕಂದಾಯವನ್ನು ಕಟ್ಟಿದ್ದೀರಾ ಎಂದರೆ ಸಾಕ್ಷಿಯು ನನಗೆ ಆ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ.

4. ಬಸವರಾಜು ಯಾರು ಎಂದು ನನಗೆ ಗೊತ್ತಿಲ್ಲ. ಬಸವರಾಜು ದಾವಾ ಸ್ವತ್ತುಗಳನ್ನು ಖರೀದಿ ಮಾಡಿದ ನಂತರ ಅವರು ಖಾತೆ ಪಹಣಿಯನ್ನು ಮಾಡಿಸಿ ಸ್ವಾಧೀನದಲ್ಲಿ ಇದ್ದರು ಎಂದರೆ ಸರಿಯಲ್ಲ. ದಾವಾ ಹಾಕುವ ಕಾಲಕ್ಕೆ ದಾಖಲಾತಿ ತೆಗೆದುಕೊಂಡಿದ್ದೀರಾ ಎಂದರೆ ಸಾಕ್ಷಿಯು ನಾನು ನಿವೃತ್ತಿ ಹೊಂದಿದ ನಂತರ ಜಮೀನನ್ನು ತಯಾರು ಮಾಡಿಸಲು ಹೋದಾಗ ಸುಳ್ಳು ಸೃಷ್ಟಿ ಮಾಡಿದ ದಾಖಲಾತಿಗಳ ಬಗ್ಗೆ ನನ್ನ ಗಮನಕ್ಕೆ ಬಂದಿದೆ ಎಂದು ನುಡಿಯುತ್ತಾರೆ. ಸದರಿ ದಾಖಲಾತಿಗಳು ಸುಳ್ಳು ಸೃಷ್ಟಿಯ ದಾಖಲಾತಿಗಳು ಅಲ್ಲ, ನನ್ನ ತಾಯಿಯೇ ಬಸವರಾಜು ರವರಿಗೆ ಮಾರಾಟ ಮಾಡಿರುವ ಬಗ್ಗೆ ದಾಖಲಾತಿಗಳು ಎಂದರೆ ಸರಿಯಲ್ಲ. ಬಸವರಾಜು ಮತ್ತು ರವರ ತಂದೆ ಪೆದ್ದಾಭೋವಿ 06.11.1987 ರಲ್ಲಿ ಲಕ್ಷ್ಮಮ್ಮ ಎನ್ನುವವರಿಗೆ ದಾವಾ ಆಸ್ತಿಗಳನ್ನು ಕ್ರಯಕ್ಕೆ ಕೊಟ್ಟಿದ್ದಾರೆ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ತದನಂತರ ಲಕ್ಷ್ಮಮ್ಮನವರ ಹೆಸರಿಗೆ ಖಾತೆ ವರ್ಗಾವಣೆಯಾದ ನಂತರ ಎರಡೂ ಸ್ವತ್ತಿನಲ್ಲಿ ಅವರೇ ಸ್ವಾಧೀನದಲ್ಲಿ ಇದ್ದರು ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

5. ಲಕ್ಷ್ಮಮ್ಮ ದಾವಾ ಜಮೀನುಗಳನ್ನು 24.04.1993 ರಲ್ಲಿ ವಿಲ್ ಮುಖಾಂತರ ತಮ್ಮ ಮಗಳಾದ ಈರಮ್ಮನಿಗೆ ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ವಿಲ್ ಬರದೆ ನಂತರ ಲಕ್ಷ್ಮಮ್ಮ ತೀರಿಕೊಂಡಿದ್ದು, ವಿಲ್ ನಂತೆ ಈರಮ್ಮನ ಹೆಸರಿಗೆ ಖಾತೆಯಾಗಿರುತ್ತದೆ ಎಂದರೆ ಆ ಬಗಗ್ಗೆ ನನಗೆ ಮಾಹಿತಿ ಇಲ್ಲ. ನಾವು ದಾಖಲಾತಿಗಳನ್ನು ಪಡೆದುಕೊಂಡ ನಂತರ ಪಹಣಿ ಪತ್ರಿಕೆಯಲ್ಲಿ ಇರುವ ವಿವರಗಳು ತಪ್ಪು ಎಂದು ಕಂದಾಯ ಇಲಾಖೆಯಲ್ಲಿ ಪ್ರಶ್ನೆ ಮಾಡಿದ್ದೀರಾ ಎಂದರೆ ಸಾಕ್ಷಿಯು ನಾವು ನ್ಯಾಯಾಲಯದಲ್ಲಿ ಕೇಳಿದ್ದೇವೆ ಎಂದು ನುಡಿಯುತ್ತಾರೆ. ಈರಮ್ಮ ಅವರ

ತಮ್ಮನ ವಿರುದ್ಧ ಕೆಳ ನ್ಯಾಯಾಲಯದಲ್ಲಿ 197/2007 ರಂತೆ ಅಸಲು ದಾವೆಯನ್ನು ತಂದಿದ್ದರು ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ, ಅದು ಸುಳ್ಳು ಸೃಷ್ಟಿತ ದಾಖಲಾತಿಗಳು ಎಂದು ನುಡಿಯುತ್ತಾರೆ. ಸದರಿ ದಾವೆಯಂತೆ ಈರಮ್ಮನೇ ಮಾಳಿಕಳು ಎಂದು 13.07.2003 ರಲ್ಲಿ ತೀರ್ಪು ಆಗಿದೆ ಎಂದರೆ ಆ ಬಗ್ಗೆ ನನಗೆ ಮಾಹಿತಿ ಇಲ್ಲ. ಸದರಿ ದಾವೆಯ ಪ್ರತಿಯನ್ನು ತೆಗೆದುಕೊಂಡಿದ್ದೀರಾ ಎಂದರೆ ಸಾಕ್ಷಿಯು ನಮಗೆ ವಿಚಾರ ಗೊತ್ತಾದ ನಂತರ ದಾಖಲಾತಿಗಳನ್ನು ಪಡೆದುಕೊಂಡು ನ್ಯಾಯಾಲಯಕ್ಕೆ ಕೊಟ್ಟಿದ್ದೇವೆ ಎಂದು ನುಡಿಯುತ್ತಾರೆ. ತದನಂತರ ಈರಮ್ಮನೇ ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಆ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ.

6. ಈರಮ್ಮ ದಿನಾಂಕ 08.07.2004 ರಂದು 1 ನೇ ಪ್ರತಿವಾದಿಗೆ ಮತ್ತು 2 ನೇ ಪ್ರತಿವಾದಿಯ ಗಂಡನಿಗೆ ಕ್ರಯ ಪತ್ರ ಮುಖಾಂತರ ದಾವಾ ಸ್ವತ್ತನ್ನು ಮಾರಾಟ ಮಾಡಿದ್ದಾರೆ ಎಂದರೆ ಆ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಅದಾದನಂತರ ಎಂ.ಆರ್.14/2004-05 ರಂತೆ 1 ನೇ ಪ್ರತಿವಾದಿಗೆ ಮತ್ತು 2 ನೇ ಪ್ರತಿವಾದಿಯ ಗಂಡನ ಹೆಸರಿಗೆ ಖಾತೆ ಬದಲಾವಣೆಯಾಗಿ ಅವರೇ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ಮತ್ತು 2 ನೇ ಪ್ರತಿವಾದಿಯ ಗಂಡನಿಗೆ 2 ನೇ ಪ್ರತಿವಾದಿ ಹೆಂಡತಿ ಮತ್ತು 4 ಜನ ಮಕ್ಕಳು ಎಂದರೆ ನನಗೆ ಆ ಬಗ್ಗೆ ಗೊತ್ತಿಲ್ಲ. ದಾವೆ ಹಾಕುವಾಗವಲೇ ಸದರಿ ವಿಚಾರ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿಯು ವಿಚಾರ ತಿಳಿದ ಕಾರಣ ಆ ಬಗ್ಗೆ ದಾವೆಯನ್ನು ತಂದಿದ್ದೇವೆ ಎಂದು ನುಡಿಯುತ್ತಾರೆ.

7. ಸುಮಾರು 30 ವರ್ಷಗಳಿಂದ ನಾನು ಬೆಂಗಳೂರಿನಲ್ಲಿ ವಾಸವಾಗಿದ್ದೇವೆ, ನಮ್ಮ ಅಣ್ಣತಮ್ಮಂದಿರು ಶಿರಾದಲ್ಲಿಯೇ ವಾಸವಾಗಿದ್ದಾರೆ. ನಾವು ಎಲ್ಲರೂ ಸೇರಿ ದಾವೆಯನ್ನು ಹಾಕಿದ್ದೇವೆ ಎಂದು ನುಡಿಯುತ್ತಾರೆ. ವಾದ ಪತ್ರದಲ್ಲಿ ನಾನು ವಾದಿಯರ ವಿಳಾಸವನ್ನು ಬೆಂಗಳೂರು ಎಂದು ತೋರಿಸಿದ್ದೇವೆ ಎಂದರೆ ಸಾಕ್ಷಿಯು ಅವರೆಲ್ಲರೂ ಅವಿದ್ಯಾವಂತರಾಗಿದ್ದು, ನೊಟೀಸ್ ಬಂದರೆ ತಿಳಿಯುವುದಿಲ್ಲ ಎಂದು ನನ್ನ ವಿಳಾಸವನ್ನು ಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ. ನನ್ನ ಮನೆಯಲ್ಲಿ ನಾನೇ ವಿದ್ಯಾವಂತೆ. ನನಗೆ ವ್ಯವಹಾರದ ಜ್ಞಾನ ಇದೆ. ಶಿರಾದಲ್ಲಿ 5-6 ವರ್ಷಗಳ ಹಿಂದೆ ಕೆ.ಎ.ಐ.ಡಿ.ಬಿ ರವರು ಜಮೀನುಗಳನ್ನು ಸ್ವಾಧೀನ

ತೆಗೆದುಕೊಂಡಿದ್ದಾರೆ ಎಂದರೆ ಆ ಬಗ್ಗೆ ನನಗೆ ಮಾಹಿತಿ ಇಲ್ಲ. ಆದರಂತೆ ಜಮೀನುಗಳ ಬೆಲೆ 3 ರಷ್ಟು ಜಾಸ್ತಿಯಾಗಿದೆ ಎಂದರೆ ಸರಿಯಲ್ಲ. ನಾನು ಹಾಜರುಪಸಿಡಿರುವ ನಿ.ಪಿ.3 ಮತ್ತು 4 ರ ಪಹಣಿ ಯಂತೆ ಪ್ರತಿವಾದಿಗಳ ಹೆಸರಿನಲ್ಲಿ ದಾವಾ ಆಸ್ತಿ ಇದೆ ಎಂದರೆ ಸಾಕ್ಷಿಯು ಸುಳ್ಳು ಸೃಷ್ಟಿಸಿದ ದಾಖಲಾತಿಗಳು ಎಂದು ನುಡಿಯುತ್ತಾರೆ.

8. ಪ್ರತಿವಾದಿಗಳ ಹೆಸರಿನಲ್ಲಿ ಖಾತೆ ಇರುವುದನ್ನು ಪ್ರಶ್ನೆ ಮಾಡಿ ಎ.ಸಿ ನ್ಯಾಯಾಲಯದಲ್ಲಿ ಕೇಸನ್ನು ಹಾಕಿದ್ದೀರಾ ಎಂದರೆ ಸಾಕ್ಷಿಯು ಪಿ.ಟಿ.ಸಿ.ಎಲ್. ನಲ್ಲಿ ಹಾಕಿದ್ದೆನು ಎಂದು ನುಡಿಯುತ್ತಾರೆ. ದಾವಾ ಜಮೀನನ್ನು ನನ್ನ ತಾಯಿ ನನ್ನ ದೊಡ್ಡಪ್ಪಂದಿರಿಂದ ಖರೀದಿ ಮಾಡಿದ ಕಾಲಕ್ಕೆ ಮಾರಾಟ ಮಾಡಲು ಡಿ.ಸಿ ರವರಿಂದ ಯಾವುದೇ ಅನುಮತಿ ಪಡೆದಿರುವುದಿಲ್ಲ. ದಾವಾ ಸ್ವತ್ತುಗಳು ಪಿ.ಟಿ.ಸಿ.ಎಲ್ ಅಡಿಯಲ್ಲಿ ಬರುವುದಿಲ್ಲ, ನನ್ನ ತಾತ ಸುಂಕಪ್ಪನವರು ಸ್ವಂತ ಖರೀದಿ ಮಾಡಿದ ಜಮೀನುಗಳು ಎಂದರೆ ಸರಿಯಲ್ಲ ಅವುಗಳು ದರಕಾಸ್ತಿನಲ್ಲಿ ಬಂದಿದೆ ಎಂದು ನುಡಿಯುತ್ತಾರೆ. ಪಿ.ಟಿ.ಸಿ.ಎಲ್ ವ್ಯಾಪ್ತಿಗೆ ಬರುತ್ತದೆ ಎಂದು ತೋರಿಸಲು ದಾಖಲಾತಿ ಇದೆ, ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ನನಗೆ ಓದಲು ಬರೆಯಲು ಬರುತ್ತದೆ.

9. ನಿ.ಪಿ. 7 ರ ದಾಖಲಾತಿಯಲ್ಲಿ ಸುಂಕಪ್ಪನ ಸ್ವಂತ ಜಮೀನು ಇದೆ ಎಂದರೆ ಸಾಕ್ಷಿಯು ದರಕಾಸ್ತಿನಲ್ಲಿ ಆಗಿದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯು ಪಿ.ಟಿ.ಸಿ.ಎಲ್ ವ್ಯಾಪ್ತಿಗೆ ಬರದೇ ಇದ್ದರೂ ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಿ.ಟಿ.ಸಿ.ಎಲ್ ಗೆ ಅರ್ಜಿ ಹಾಕಿ ಸುಮಾರು 15 ವರ್ಷಗಳು ಆಗಿವೆ. ನನ್ನ ತಾಯಿ ಜಮೀನನ್ನು ಮಾರಾಟ ಮಾಡಿದ ನಂತರ ನನಗಾಗಲೀ ನನ್ನ ಅಣ್ಣಂದಿರಿಗಾಗಲೀ ಯಾವುದೇ ಹಕ್ಕು ಸ್ವಾಧೀನ ಇಲ್ಲ ಎಂದರೆ ಸರಿಯಲ್ಲ. ಪ್ರಸ್ತುತ ಪ್ರತಿವಾದಿಗಳು ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸಾಕ್ಷಿಯು ನಾವೇ ಸ್ವಾಧೀನದಲ್ಲಿ ಇದ್ದೇವೆ ಎಂದು ನುಡಿಯುತ್ತಾರೆ.

ಮರುವಿಚಾರಣೆ ಇಲ್ಲ.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್ ಗೊಳಿಸಿ ದಾಖಲಿಸಿ ಪ್ರಿಂಟ್ ತೆಗೆಯಲಾಯಿತು)

**ಓದಿ ಹೇಳಿ ಕೇಳಿ ಸರಿ ಇದೆ,**

**ಹಿರಿಯ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ, ಶಿರಾ.**